## ಕಾಯನೊಂದಿಗೆ ಕಮಲಿ ಮದುವೆ?

ಬದುಕಿನಲ್ಲಿ ಕಳೆದು ಹೋದ ಅಮೂಲ್ಯ ನಿಧಿ ಮರಳಿ ಪಡೆದ ಖುಷಿ ಅನುಭವಿಸುತ್ತಿದ್ದ. ಅವನನ್ನು ತುಂಬಾ ಹಚ್ಚಿಕೊಂಡಿದ್ದ ಕಾಯನಿಗೆ ಪಾಂಡುರಂಗನಿಗೆ ಏನೇ ಆದರೂ ಸಹಿಸುತ್ತಿರಲಿಲ್ಲ. ಯಾರ ಬಳಿಯೂ ಮಾತೇ ಆಡದ ಕಾಯನನ್ನು ಪಾಂಡುರಂಗ ವಾಚಾಳಿಯಾಗಿಸಿದ್ದ. ಭಾವನಾತ್ಮಕವಾಗಿ ತುಂಬಾ ಹಚ್ಚಿಕೊಂಡಿದ್ದ ಕಾಯನೇ ಈಗ ಪಾಂಡುವಿಗೆ ನಿಜಾರ್ಥದಲ್ಲಿ ತಾಯಾಗಿದ್ದ. ಅವನನ್ನು ಕುಮುದಿನಿಗೆ ಕರೆದೊಯ್ದು ಮೀಯಿಸುತ್ತಿದ್ದ. ಮೈ ಒರೆಸುತ್ತಿದ್ದ. ಬಟ್ಟೆ ತೊಡಿಸುತ್ತಿದ್ದ. ಊಟ ಮಾಡಿಸುತ್ತಿದ್ದ. ಅವನ ಸಣ್ಣ ಸಣ್ಣ ಕ್ರಿಯೆಗಳಲ್ಲೂ ಆನಂದ ಹುಡುಕುತ್ತಿದ್ದ ಕಾಯನಿಗೆ ಬದುಕು ಸುಂದರ ಎನಿಸತೊಡಗಿದ್ದು ಸುಳ್ಳಲ್ಲ. ಅವನು ಇಲ್ಲದ ಕೊರತೆಯನ್ನು ಹುಡುಕಿಕೊಂಡು ಇಲ್ಲಿಗೆ ಬಂದದ್ದು ಒಳಿತೇ ಆಯಿತು ಎನಿಸಿತ್ತು. ಎಷ್ಟೋ ಸಲ ರಂಗ, ರಾತ್ರಿ ಕಾಯನ ಜೊತೆ ಜಂಪಯ್ಯನ ಮನೆಯ ಜಗುಲಿಯಲ್ಲಿ ಮಲಗಿ ಬಿಡುತ್ತಿದ್ದ. ಶಿವಯ್ಯನ ಮನೆಯ ಸಂಪೂರ್ಣ ಕಾರ್ಯ ಹೊರೆಯನ್ನು ತನ್ನ ಹೆಗಲಿಗೇರಿಸಿಕೊಂಡ ಕಮಲಿಗೆ ಇದರಿಂದ ಅನುಕೂಲವೇ ಆಗಿತ್ತು. ತಂದೆಯ ಪ್ರೀತಿಯನ್ನೇ ಕಾಣದ ರಂಗನಿಗೂ ಕಾಯನ ಮಮತೆ ಬಂಧಿಸಿದ್ದು ಅವಳಿಗೆ ವಿಶೇಷವೆಂದೇನೂ ಅನ್ನಿಸಿರಲಿಲ್ಲ. ಜಂಪಯ್ಯ ಶಿವಯ್ಯ ಹೊರಗೆ ಜಮೀನಿನಲ್ಲಿ ಕೆಲಸದಲ್ಲೇ ಸದಾ ವ್ಯಸ್ಥರಾಗಿರುತ್ತಿದ್ದರು. ಅಗತ್ಯ ಬಿದ್ದಾಗ ಕಾಯ ಅವರೊಂದಿಗೆ ಸಹಕರಿಸುತ್ತಿದ್ದ. ಅವರು ತಮ್ಮ ಜಮೀನಿನಲ್ಲಿ ಒಂಟಿ ಬೆಳೆ ಪದ್ಧತಿ ಅನುಸರಿಸುವ ಬದಲು ಬಹುಬೆಳೆ ಪದ್ಧತಿಯನ್ನು ಅನುಸರಿಸಿಕೊಂಡಿದ್ದರು. ಏಕೆಂದರೆ ಶಿವಯ್ಯ ಈ ನಿಟ್ಟಿನಲ್ಲಿ ಹೆಚ್ಚು ಅನುಭವಸ್ಥನಾಗಿದ್ದ.

ಅವನು ಮುಂಚೆ ಕಾರಗದ್ದೆಯಲ್ಲಿ ಅನಂತಯ್ಯನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ಎಕರೆ ತುಂಬಾ ದಾಳಿಂಬೆಯನ್ನೇ ಬೆಳೆಸಿದ್ದರು. ಬೆಳೆ ಕೈಗೆ ಬರಲು ಆರು ವರ್ಷಗಳೇ ಬೇಕಾದವು. ಅದಕ್ಕೆ ಹೆಚ್ಚು ಗೊಬ್ಬರ ಹಾಕಿ, ರಾಸಾಯನಿಕಗಳನ್ನು ಸಿಂಪಡಿಸಿ ಮಕ್ಕಳಂತೆ ಆರೈಕೆ ಮಾಡಲಾಗಿತ್ತು. ಬೆಳೆಯೂ ಅಷ್ಟೆ ಚೆನ್ನಾಗಿ ಬಂದಿತ್ತು. ಒಂದೊಂದು ಹಣ್ಣು ಏನಿಲ್ಲವೆಂದರೂ ಎಂಟು ನೂರು ಗ್ರಾಂ ತೂಗುತ್ತಿತ್ತು. ಹೆಚ್ಚು ಕೆಂಪಗೆ ಕಾಣಲೆಂದು ರಾಸಾಯನಿಕ ಮದ್ದು ಯಥೇಚ್ಛವಾಗಿ ಬಳಸಲಾಗಿದ್ದರಿಂದ ನಿರೀಕ್ಷೆಯಂತೆ ಬಣ್ಣ ತಳೆದಿತ್ತು. ಕೆ.ಜಿ.ಗೆ ಬೆಲೆಯೂ ನೂರ ಮೂವತ್ತು ದಾಟಿತ್ತು. ಅನಂತಯ್ಯ ತನ್ನ ಬೆಳೆಗಿಂತಲೂ ಹೆಚ್ಚಾಗಿ ಬರುವ ಲಾಭವನ್ನು ನೆನೆದು ಬೀಗಿದ್ದ.

ಕನಸಿನ ಮಹಲು ಕಟ್ಟಿದ್ದ. ಆದರೆ ಬೆಂಗಳೂರಿನ ಸೊಸೈಟಿಗೆ ಹೋದವರ ಹಣ್ಣು ಸಾರಾಸಗಟಾಗಿ

